# ಪೇಟಿಎಂ: ಇಂಟರ್ನೆಟ್ ಇಲ್ಲದೆ ಹಣ ಪಾವತಿ

**ಅಚಾನಕ್ಕಾಗಿ ಕೈಕೊಡುವ ಅಂತರ್ಜಾಲದಿಂದ ಹಣ ಪಾವತಿಗೂ ತೊಡಕು. ಇದಕ್ಕೆ ಪರಿಹಾರ ಕಂಡುಕೊಂಡಿರುವ ರಾಷ್ಟ್ರೀಯ ಪಾವತಿ ನಿಗಮವು ಯುಪಿಐ ಲೈಟ್ ವ್ಯವಸ್ಥೆ ಜಾರಿಗೆ ತಂದಿದೆ. ಅಂತರ್ಜಾಲ ಇಲ್ಲದೆ ಹಣ ಸಂದಾಯ ಮಾಡುವುದು ಇದರ ವಿಶೇಷ.**

■ **ಶಶಿಕುಮಾರ್ ಸಿ.**

ರಾಷ್ಟ್ರೀಯ ಪಾವತಿ ನಿಗಮವು (ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ–ಎನ್‌ಪಿಸಿಐ) ಅಂತರ್ಜಾಲ ಸೌಲಭ್ಯವಿಲ್ಲದೆಯೂ ಸುರಕ್ಷಿತವಾಗಿ ಹಣ ಸಂದಾಯ ಮಾಡಲು ನೆರವಾಗುವ ತಂತ್ರಜ್ಞಾನ ವ್ಯವಸ್ಥೆಯಾದ 'ಯುಪಿಐ ಲೈಟ್' (UPI Lite) ಜಾರಿಗೆ ತಂದಿದೆ. ಇದನ್ನು ಡಿಜಿಟಲ್ ಪೇಮೆಂಟ್ ಆ್ಯಪ್ ಆದ ಪೇಟಿಎಂ, ದೇಶದಲ್ಲೇ ಮೊದಲ ಬಾರಿಗೆ ಜಾರಿಗೆ ತಂದಿದೆ.

ಯುಪಿಐ ಮಾದರಿಯಲ್ಲಿಯೇ ಮತ್ತು ಅದಕ್ಕಿಂತ ಸರಳವಾಗಿ ಕಾರ್ಯನಿರ್ವಹಿಸುವ ಯುಪಿಐ ಲೈಟ್, ಭಾರತೀಯ ರಿಸರ್ವ್ ಬ್ಯಾಂಕ್ ಪರಿಚಯಿಸಿರುವ ಹೊಸ ಪೇಮೆಂಟ್ ತಂತ್ರಜ್ಞಾನ. ಈ ತಂತ್ರಜ್ಞಾನದ ಸಹಾಯದೊಂದಿಗೆ ಅಂತರ್ಜಾಲವಿಲ್ಲದೆಯೇ ವೇಗವಾಗಿ ಮತ್ತು ಸರಳವಾಗಿ ಹಣ ಪಾವತಿ ಮಾಡಬಹುದು.

## ಅಂತರ್ಜಾಲ ಬೇಕಿಲ್ಲ!

ಯುಪಿಐ ಲೈಟ್‌ನ ಮುಖ್ಯ ಉದ್ದೇಶ ಅಂತರ್ಜಾಲವಿಲ್ಲದೆ ಹಣ ವರ್ಗಾವಣೆ ಮಾಡುವುದು. ಅಂತರ್ಜಾಲ ಸೇವೆಯಿಲ್ಲದೆ ಥರ್ಡ್ ಪಾರ್ಟಿ ಆ್ಯಪ್‌ಗಳ (ಉದಾಹರಣೆಗೆ ಪೇಟಿಎಂನಂತಹ ಆ್ಯಪ್‌ಗಳು) ಮೂಲಕ ವ್ಯಾಲೆಟ್‌ನಿಂದ ಪೇಮೆಂಟ್ ಮಾಡುವ ವ್ಯವಸ್ಥೆಯನ್ನು ವಿಶೇಷವಾಗಿ ಅಭಿವೃದ್ಧಿಪಡಿಸಿದೆ. ಪೇಮೆಂಟ್ ಮಾಡುವಾಗ ಇದು ನಿಮ್ಮ ವ್ಯಾಲೆಟ್‌ನಲ್ಲಿರುವ ಹಣದೊಂದಿಗೆ ನೇರವಾಗಿ ಸಂಪರ್ಕ ಹೊಂದಿರುತ್ತದೆ ಮತ್ತು ಆ ಹಣವನ್ನು ಮಾತ್ರ ಪೇಮೆಂಟ್ ಮಾಡಲು ಬಳಸುತ್ತದೆ.

## ವ್ಯಾಲೆಟ್‌ನೊಂದಿಗೆ ವ್ಯವಹಾರ

ಈ ಪಾವತಿ ವ್ಯವಸ್ಥೆಯು ನಿಮ್ಮ ಬ್ಯಾಂಕ್ ಖಾತೆಯೊಂದಿಗೆ ನೇರವಾಗಿ ಸಂಬಂಧವನ್ನು ಹೊಂದಿರುವುದಿಲ್ಲ. ಡಿಜಿಟಲ್ ಪೇಮೆಂಟ್ ಸೇವೆ ಒದಗಿಸುವ ಥರ್ಡ್ ಪಾರ್ಟಿ ಆ್ಯಪ್‌ಗಳ ವ್ಯಾಲೆಟ್‌ನಲ್ಲಿರುವ ಹಣದೊಂದಿಗೆ ಮಾತ್ರ ವ್ಯವಹಾರ ಮಾಡುತ್ತದೆ.

ಇದಕ್ಕಾಗಿ ಗ್ರಾಹಕರು ಥರ್ಡ್ ಪಾರ್ಟಿ ಆ್ಯಪ್‌ಗಳ ವ್ಯಾಲೆಟ್‌ಗೆ ಮುಂಗಡವಾಗಿ ಹಣ ಜಮೆ ಮಾಡಿಡಬೇಕು. ಆನ್–ಡಿವೈಸ್ ವ್ಯಾಲೆಟ್ ಆಗಿರುವ ಯುಪಿಐ ಲೈಟ್‌ನಲ್ಲಿ ಬಳಕೆದಾರರು ಆನ್‌ಲೈನ್‌ನಲ್ಲಿರುವಾಗ ವ್ಯಾಲೆಟ್‌ಗೆ ಹಣವನ್ನು ಸೇರಿಸಬೇಕು. ನಂತರ ಅಂತರ್ಜಾಲ ಸಂಪರ್ಕ ಇಲ್ಲದಿದ್ದರೂ ಬಳಕೆದಾರರು ಯಾರಿಗೆ



ಬೇಕಾದರೂ ಹಣ ಕಳುಹಿಸಬಹುದು. ಒಂದು ಬಾರಿ 2000 ರೂಪಾಯಿಯಂತೆ ಎರಡು ಬಾರಿ, ದಿನವೊಂದಕ್ಕೆ 4000 ರೂಪಾಯಿಯನ್ನು ಪೇಟಿಎಂ ವ್ಯಾಲೆಟ್‌ಗೆ ಜಮೆ ಮಾಡಬಹುದು.

## ಪಿನ್ ಅಗತ್ಯವಿಲ್ಲ!

ಯುಪಿಐ ಆಧರಿತ ಪೇಮೆಂಟ್ ಆ್ಯಪ್‌ಗಳಲ್ಲಿ ಯುಪಿಐ ಪಿನ್ ನಮೂದಿಸದೆ ಹಣ ವರ್ಗಾವಣೆ ಮಾಡಲು ಸಾಧ್ಯವಿಲ್ಲ. ಆದರೆ ಯುಪಿಐ ಲೈಟ್ ವ್ಯವಸ್ಥೆಯಲ್ಲಿ ಹಣ ವರ್ಗಾವಣೆ ಮಾಡಲು ಯಾವುದೇ ರೀತಿಯ ಯುಪಿಐ ಪಿನ್ (ಪಾಸ್‌ವರ್ಡ್) ನಮೂದಿಸುವ ಅಗತ್ಯವಿಲ್ಲ. ಥರ್ಡ್ ಪಾರ್ಟಿ ಆ್ಯಪ್‌ಗಳ ವ್ಯಾಲೆಟ್‌ನಲ್ಲಿ ಇರುವ ಹಣವನ್ನು ಎಷ್ಟು ಸಾಧ್ಯವೋ ಅಷ್ಟೂ ಬಾರಿ ವರ್ಗಾವಣೆ ಮಾಡಬಹುದು. ಅಥವಾ ಅದೇ ವ್ಯಾಲೆಟ್‌ಗೆ ಹಣವನ್ನು ಮತ್ತೊಬ್ಬರಿಂದ ಸ್ವೀಕರಿಸಬಹುದು.

## ಗರಿಷ್ಠ 200ಕ್ಕೆ ಕೊಕ್ಕೆ

ಯುಪಿಐ ಲೈಟ್ ಸೇವೆಯಿಂದ ಒಂದು ಬಾರಿಗೆ ಗರಿಷ್ಠ 200 ರೂಪಾಯಿ ಮಾತ್ರ ವರ್ಗಾವಣೆ (ಪೇಮೆಂಟ್) ಮಾಡಲು ಸಾಧ್ಯ. ಬಳಕೆದಾರರ ಹಣದ ಸುರಕ್ಷತೆ ದೃಷ್ಟಿಯಿಂದ ಈ ಮಿತಿಯನ್ನು ರಾಷ್ಟ್ರೀಯ ಪಾವತಿ ನಿಗಮವು ಹೇರಿದೆ. 200 ರೂಪಾಯಿ ಮತ್ತು ಅದಕ್ಕಿಂತ ಕಡಿಮೆ ಮೊತ್ತದ ಹಣ ಪಾವತಿಯನ್ನು ಎಷ್ಟು ಬಾರಿಯಾದರೂ, ಅಂದರೆ ವ್ಯಾಲೆಟ್‌ನಲ್ಲಿ ಸಾಕಷ್ಟು ಹಣ ಇರುವವರೆಗೆ ಪೇಮೆಂಟ್ ಮಾಡಬಹುದು. ಯುಪಿಐ ಲೈಟ್‌ನಲ್ಲಿ ನೀವು ದಿನವೊಂದಕ್ಕೆ ಎಷ್ಟು ವಹಿವಾಟುಗಳನ್ನು ಬೇಕಾದರೂ ಮಾಡಬಹುದು. ಪ್ರಸ್ತುತ ಯುಪಿಐ ಸೇವೆಯಲ್ಲಿ ದಿನವೊಂದಕ್ಕೆ ಕೇವಲ 10 ಬಾರಿ ಮಾತ್ರ ಹಣ ವರ್ಗಾವಣೆ ಮಾಡಲು ಅವಕಾಶವಿದೆ.

## ಪೇಟಿಎಂ ಮೊದಲು

ಯುಪಿಐ ಲೈಟ್ ತಂತ್ರಜ್ಞಾನ ವ್ಯವಸ್ಥೆಯನ್ನು ತ್ವರಿತವಾಗಿ ಪೇಟಿಎಂ ಆ್ಯಪ್ ಮಾತ್ರ ಅಳವಡಿಸಿಕೊಂಡಿದ್ದು, ಮಿಕ್ಕೆಲ್ಲ ಡಿಜಿಟಲ್ ಪೇಮೆಂಟ್ ಆ್ಯಪ್‌ಗಳು ಹಿಂದೆಬಿದ್ದಿವೆ. ಪೇಟಿಎಂನ ಸಾಕಷ್ಟು ಮಂದಿ ಈ ಆಯ್ಕೆಯನ್ನು ಬಳಸುವ ಸಾಧ್ಯತೆ ಇದೆ. ಯುಪಿಐ ಲೈಟ್ ಪೇಮೆಂಟ್ ಮಾದರಿಯಿಂದ ಬ್ಯಾಂಕ್‌ನ ಹೊರೆಯೂ ಕಡಿಮೆಯಾಗಲಿದೆ.

ಸದ್ಯ ಚಾಲ್ತಿಯಲ್ಲಿರುವ ಡಿಜಿಟಲ್ ಪೇಮೆಂಟ್ ಆ್ಯಪ್‌ಗಳ ಮೂಲಕ ಮಾಡಿದ ಪ್ರತಿ ಹಣದ ವರ್ಗಾವಣೆಯ ಆಯಾ ಆ್ಯಪ್‌ಗಳೊಂದಿಗೆ ಲಿಂಕ್ ಆದ ಬ್ಯಾಂಕ್ ಖಾತೆಯ ಪಾಸ್‌ಬುಕ್‌ಗೆ ಸೇರಿಸುವ ಹೊಣೆಯು ಬ್ಯಾಂಕ್‌ನದ್ದಾಗಿತ್ತು. ಯುಪಿಐ ಲೈಟ್ ಪೇಮೆಂಟ್ ಮಾದರಿಯು ಪಾಸ್‌ಬುಕ್‌ಗೆ ಹಣ ವರ್ಗಾವಣೆಯ ಮಾಹಿತಿಯನ್ನು ಸೇರಿಸುವ ಉಸಾಬರಿಯಿಂದ ಮುಕ್ತಗೊಳಿಸಿದೆ. ಅದರ ಹೊಣೆಗಾರಿಕೆ ಪೇಟಿಎಂ ಮೇಲೆ ಬೀಳಲಿದ್ದು, ಆ ಮಾಹಿತಿಯು ಆ್ಯಪ್‌ನ ಹಣ ವರ್ಗಾವಣಾ ಹಿಸ್ಟರಿ ವಿಭಾಗದಲ್ಲಿ ಲಭ್ಯವಾಗುತ್ತದೆ.

## ಯುಪಿಐ ಲೈಟ್ ಆಯ್ಕೆ ಹೇಗೆ?

- ಪೇಟಿಎಂ ಆ್ಯಪ್ ಅನ್ನು ಇತ್ತೀಚಿನ ವರ್ಷನ್‌ಗೆ ಅಪ್‌ಡೇಟ್ ಮಾಡಿಕೊಳ್ಳಿ.
- ಆ್ಯಪ್‌ನ ಹೋಂ ಪೇಜ್‌ನಲ್ಲಿ ಕಾಣಿಸುವ ಪ್ರೊಫೈಲ್ ಆಯ್ಕೆಯ ಮೇಲೆ ಕ್ಲಿಕ್ಕಿಸಿ.
- ನಂತರ ಕಾಣಿಸುವ ಯುಪಿಐ ಮತ್ತು ಪೇಮೆಂಟ್ ಸೆಟ್ಟಿಂಗ್ ಆಯ್ಕೆಯ ಮೇಲೆ ಒತ್ತಿ.
- ಅದರ್ ಸೆಟ್ಟಿಂಗ್ಸ್ ಆಯ್ಕೆಯನ್ನೊಮ್ಮೆ ಕ್ಲಿಕ್ಕಿಸಿದರೆ ಯುಪಿಐ ಲೈಟ್ ಫೀಚರ್ ಕಾಣಿಸಿಕೊಳ್ಳುತ್ತದೆ.
- ಯುಪಿಐ ಲೈಟ್ ಒತ್ತಿ, ಪೇಟಿಎಂಗೆ ಲಿಂಕ್ ಆಗಿರುವ ಬ್ಯಾಂಕ್ ಸೆಲೆಕ್ಟ್ ಮಾಡಿಕೊಳ್ಳಿ.
- ಆ್ಯಡ್ ಮನಿ ಟು ಆಕ್ಟಿವೇಟ್ ಯುಪಿಐ ಲೈಟ್ ಆಯ್ಕೆಯನ್ನು ಕ್ಲಿಕ್ಕಿಸಿ, ಹಣವನ್ನು ಆ್ಯಡ್ ಮಾಡಿ.
- ಯುಪಿಐ ಲೈಟ್‌ಗೆ (ಪೇಟಿಎಂ ವ್ಯಾಲೆಟ್‌ಗೆ) ಸೇರ್ಪಡೆ ಮಾಡುವ ಮೊತ್ತವನ್ನು ನಮೂದಿಸಿ.
- ಬಳಿಕ ಎಂಪಿನ್ ಅನ್ನು ಒಂದು ಬಾರಿಗೆ ನಮೂದಿಸಿದರೆ ಯುಪಿಐ ಲೈಟ್ ಬಳಕೆಗೆ ಲಭ್ಯ.

■